ಹೇಳಿದೆನಲ್ಲ, ಅಲ್ಲಿ ಹೋಗುವ ಮುನ್ನವೇ ಉತ್ತರ ಭಾರತದ ರಂಗಭೂಮಿಯ ಪರಿಚಯ ನನಗೆ ಸಾಕಷ್ಟಿತ್ತು. ದೆಹಲಿಗೆ ಹೋದಮೇಲೆ ಇನ್ನಷ್ಟು ನಿಕಟವಾಗಿ ಅದ್ರೊಂದಿಗೆ ವ್ಯವಹರಿಸಲಿಕ್ಕೆ ಅವಕಾಶವಾಯಿತು. ಮಣಿಪುರದ ಶ್ರೇಷ್ಠ ನಿರ್ದೇಶಕರಾದ ಕನ್ಹಯ್ಯಲಾಲ್ ಮತ್ತು ಲೋಕೇಂದ್ರ ಆರಂಭಂ ಬರುವಾ ಅವರಿಂದ ಸಾಕಷ್ಟು ಕಲಿತೆ. ಬೇರೆಬೇರೆ ರಂಗಕರ್ಮಿಗಳ ಒಡನಾಟ ಕೂಡ ನನ್ನ ನಾಟಕದ ಕಲ್ಪನೆಯನ್ನು ಮಾರ್ಪಡಿಸಿದೆ. ಅಸ್ಸಾಂನಲ್ಲಿ ಹೊಸ ರಂಗ ಚಳವಳಿ ಶುರುವಾಯಿತು. ಅದಕ್ಕೆ ನನ್ನ ನಾಟಕಗಳು ಕೂಡ ಒಂದರ್ಥದಲ್ಲಿ ಕಾರಣವಾದವು. ನನ್ನ ಶಿಷ್ಯನೊಬ್ಬನಿದ್ದ. ಆತ ನನ್ನ ನಾಟಕಗಳನ್ನು ಹೊಸ ರೀತಿಯಲ್ಲಿ ಪ್ರದರ್ಶಿಸಿದ. ನಾಲ್ಕೈದು ವರ್ಷ ಭಾರತ ರಂಗಮಹೋತ್ಸವ ನಡೆಯಿತು. ಅದರಲ್ಲಿ ನನ್ನ ನಾಟಕಗಳು ನಿರಂತರವಾಗಿ ಪ್ರದರ್ಶನಗೊಂಡವು. ನನ್ನ 'ಮದುವೆ ಹೆಣ್ಣು' ಅಲ್ಲಿನ ಬುಡಕಟ್ಟು ಜನರಿಗೆ ತುಂಬಾ ಇಷ್ಟವಾಯಿತು. ಆಮೇಲೆ ನಾನು ಹೆಚ್ಚೆಚ್ಚು ಹಿಮಾಲಯ ತಿರುಗಾಡಿದೆ. ಅಲ್ಲಿನ ಪರಿಸರ, ಸಸ್ಯ, ಪರ್ವತ, ಹಳ್ಳಿಗಾಡು, ಸಂಸ್ಕೃತಿ, ಲೇಖಕರ, ಸಂತರ ಒಡನಾಟ ಕೂಡ ನನ್ನ ಜೀವನದಲ್ಲಿ ಸಾಹಿತ್ಯದಲ್ಲಿ ಮುಖ್ಯ ಪಾತ್ರ ವಹಿಸಿದೆ. ವಿವಿಧ ಪ್ರಾದೇಶಿಕ ವಿವರಗಳು, ಪ್ರಕೃತಿ ನನ್ನ ಕಾವ್ಯದಲ್ಲಿ ಪ್ರವೇಶ ಮಾಡ್ತು. ಲ್ಯಾಂಡ್‌ಸ್ಕೇಪ್ ಏನಿದೆ ಇದು ವಿಚಿತ್ರವಾಗಿ ನನ್ನನ್ನು ಕಾಡಿದೆ. ಸಂಗಂ ಸಾಹಿತ್ಯದಲ್ಲಿ ಹೇಳುವಂತೆ ನನ್ನ ಕಾವ್ಯದ 'ತಿಣೈ' ಏನಿದೆ ಅಂದ್ರೆ ಈ ಲ್ಯಾಂಡ್‌ಸ್ಕೇಪ್ ಅದು ಕೇವಲ ಕರ್ನಾಟಕವಲ್ಲ. ಭಾರತವೂ ಸೇರಿದಂತೆ ಜಗತ್ತಿನ ಅನೇಕ ದೇಶಗಳನ್ನು ಒಳಗೊಂಡಿದೆ.

◆ ನಿಮ್ಮ ಕಾವ್ಯದಲ್ಲಿ ಬೇರೆ ಬೇರೆ ಸಂಸ್ಕೃತಿಯ ಕಲ್ಪನೆಗಳೆಲ್ಲ ಬೆರೆತುಬಿಟ್ಟಿವೆ. ಬೌದ್ಧ, ವಚನ, ಜನಪದ, ತತ್ತ್ವಪದ, ಸೂಫೀ, ಝೆನ್, ಗಜಲ್, ಬಾಗ್ದಾದ್, ಮಚ್ಚು ಪಿಚ್ಚು, ಬುಡಕಟ್ಟು ಇತ್ಯಾದಿ. ಅವೆಲ್ಲ ಪರಸ್ಪರ ಬೆರೆತು ಬೇರೆ ಆಕಾರವನ್ನೆ ಪಡೆದಿವೆ. ಅಂದರೆ ಅಲ್ಲಿ ಅವುಗಳ ಮೂಲ ಆಕಾರ ಇರುವುದಿಲ್ಲ. ಅವುಗಳ ಬಿಂಬ ಮಾತ್ರ ಇರ್ತದೆ. ಪರಿಣಾಮ ಮಾತ್ರ ಹೊಳೀತಿರ್ತದೆ. ಅಂದ್ರೆ ಅಲ್ಲೊಂದು ನಿಮ್ಮ ಮಾನಸಿಕ ಪಯಣ ಇದೆ. ನಿಮ್ಮ ಫಿಸಿಕಲ್ ಆದ ಪಯಣ ಮತ್ತು ಮಾನಸಿಕವಾದ ಪಯಣ ಎಲ್ಲ ಸಂಸ್ಕೃತಿಗಳ ಗಡಿ ದಾಟಿ ಹೊಸದೊಂದೇ ಲೋಕಕ್ಕಾಗಿ ಹಂಬಲಿಸ್ತದೆ. ನೀವು ಮೆಕ್ಸಿಕೊಗೆ ಹೋಗಿದ್ದು, ಲ್ಯಾಟಿನ್ ಅಮೆರಿಕಕ್ಕೆ ಹೋದದ್ದು, ಜರ್ಮನಿಗೆ ಹೋದದ್ದು ಎಲ್ಲವೂ ಕಾವ್ಯದಲ್ಲಿ ಬಂದಿವೆ. ಇದೆಲ್ಲ ತನ್ನ ಪ್ರವಾಸ ಕಥನದ ಆವರಣ ಕಳಚಿಕೊಂಡು ಕಾವ್ಯದಾವರಣದಲ್ಲಿ ಮೂಡಿದೆ. ಈ ಮಾನಸಿಕ ಪಯಣ ಮತ್ತು ದೈಹಿಕ ಪಯಣವನ್ನು ಹೇಗೆ ಅರ್ಥೈಸಿಕೊಳ್ಳುವುದು? ನಿಮ್ಮ ನಂಬಿಕೆಯಲ್ಲಿ ಇದೆಲ್ಲ ಏನಾಗಿ ನಿಮಗೆ ಒದಗಿದೆ?

ಇದು ದೇಹ ಮನಸ್ಸುಗಳ ಮುಖಾಮುಖಿ ಇರಬಹುದೇನೊ. ನನಗೆ ಸ್ಪಷ್ಟವಾಗಿ ಗೊತ್ತಾಗುತ್ತಿಲ್ಲ. ನೀನು ಕೇಳಿದ ಮೇಲೆ ಈಗ ವಿಚಾರ ಮಾಡುತ್ತಿರುವೆ. ಕಾವ್ಯ ಮೂಲಭೂತವಾಗಿ ಮನೋಯಾತನೆ. ಉದಾಹರಣೆಗೆ ನಾನು ಈ ಹಿಂದೆ 'ಶಂಸ್ ಈ ತಬ್ರೀಜ್' ಬರೆದಾಗ ಅದನ್ನು ಭೋಪಾಲಿನ ಏಷಿಯಾ ಪೋಯೆಟ್ಸ್ ಮೀಟ್‌ನಲ್ಲಿ ಓದಿದ್ದೆ. ಅಲ್ಲಿಗೆ ಬಂದಿದ್ದ ಕಾಶ್ಮೀರಿ ಕವಯಿತ್ರಿಯೊಬ್ಬಳು ನೀವು ಇಷ್ಟೆಲ್ಲ ಪ್ರದೇಶ ಹೇಗೆ ಓಡಾಡಿದ್ರಿ ಅಂತ ಕೇಳಿದ್ಲು. ಹಾಗೆ ನೋಡಿದರೆ ನಾನು ಆ ಪ್ರದೇಶಗಳನ್ನ ಫಿಸಿಕಲ್ ಆಗಿಯೇನೂ ತಿರುಗಾಡಿದ್ದಿಲ್ಲ. ಆದರೆ, ಮಾನಸಿಕವಾಗಿ ಸುತ್ತಾಡಿದ್ದೆ ಅನಿಸುತ್ತೆ. ನೋಡಿ, ಮಧುರಚೆನ್ನರು ಕರ್ನಾಟಕದ ಒಂದು ಪುಟ್ಟ ಹಳ್ಳಿ ಹಲಸಂಗಿಯಲ್ಲಿ ಹುಟ್ಟಿ ಇಡೀ ಜಗತ್ತಿನ ಅನುಭಾವಿಕ ಪಯಣ ಮಾಡಿದ್ದಾರೆ. ಕವಿಗೆ ಒಂದು ಗ್ರಹಣೇಂದ್ರೀಯ ಇದೆ; ಅದು ಕಲ್ಪನೆ. ಇದರ ಜೊತೆಗೆ ನನ್ನ ಬೌದ್ಧಿಕ ಪಯಣವೇನಿತ್ತು ಅದು ನನ್ನ ಕಾವ್ಯಕ್ಕೆ ಇನ್ನಷ್ಟು ಕಾವು ತಂದುಕೊಟ್ಟಿತು.